**DECEMBER 3,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದುತ್ತಿರುವವರು: ವಿವೇಕಾದಿತ್ಯ ಕನಿಯಾಲ**

<><><>

**ಧಾರವಾಡದ ಜನರ ಸಂಗೀತ ಪ್ರೀತಿ, ಕಲಾವಿದರನ್ನು ಎತ್ತರಕ್ಕೆ ಬೆಳೆಸಿದೆ ಎಂದು ಪದ್ಮಶ್ರೀ ಪುರಸ್ಕೃತ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಜ್ಞ, ಪಂಡಿತ ಎಂ. ವೆಂಕಟೇಶಕುಮಾರ ಹೇಳಿದ್ದಾರೆ. ಧಾರವಾಡ ಘರಾಣೆಯ, ಸಿತಾರ್ ರತ್ನ ರಹಿಮತ್ ಖಾನ್ ಪುಣ್ಯಸ್ಮರಣೆ ನಿಮಿತ್ತ, ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸ್ಮಾರಕ ಟ್ರಸ್ಟ್, ಭಾರತೀಯ ಸಂಗೀತ ವಿದ್ಯಾಲಯ, ಧಾರವಾಡದ ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ್ದ ಇನ್ಫೋಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸಂಸ್ಮರಣಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಇನ್ಫೋಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸಂಸ್ಮರಣಾ ಪ್ರಶಸ್ತಿಯನ್ನು, ಗಣ್ಯರು ಖ್ಯಾತ ಹಿಂದೂಸ್ಥಾನಿ ಗಾಯಕಿ, ಅಶ್ವಿನಿ ಭಿಡೆ ಅವರಿಗೆ ಪ್ರದಾನಿಸಿದರು.**

<><><>

**ಬಾಗಲಕೋಟೆಯ ರಾಜ್ಯ ಬಯಲಾಟ ಅಕಾದೆಮಿ, 2024 ಹಾಗೂ 2025ನೇ ಸಾಲಿನ, ಗೌರವ ಪುರಸ್ಕಾರ ಹಾಗೂ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಅಕಾದೆಮಿ ಅಧ್ಯಕ್ಷ ಕೆ.ಆರ್.ದುರ್ಗಾದಾಸ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಪ್ರತಿ ವರ್ಷ ಐವರು ಸಾಧಕರಿಗೆ ಗೌರವ ಪುರಸ್ಕಾರ ಹಾಗೂ 10 ಜನ ಕಲಾವಿದರಿಗೆ ವಾರ್ಷಿಕ ಪ್ರಶಸ್ತಿ ನೀಡಿ, ಬಯಲಾಟ ಅಕಾದೆಮಿ ಗೌರವಿಸುತ್ತದೆ. ಗೌರವ ಪುರಸ್ಕಾರಕ್ಕೆ ತಲಾ 50 ಸಾವಿರ ರೂಪಾಯಿ ನಗದು ಹಾಗೂ ಫಲಕ, ವಾರ್ಷಿಕ ಪ್ರಶಸ್ತಿ ವಿಜೇತರಿಗೆ, ತಲಾ 25 ಸಾವಿರ ರೂಪಾಯಿ ನಗದು ಹಾಗೂ ಫಲಕ ನೀಡಿ ಗೌರವಿಸಲಾಗುತ್ತದೆ. ಈ ತಿಂಗಳ ಕೊನೆಯ ವಾರದಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗುವುದು ಎಂದರು. ಬಯಲಾಟ ಕಲಾವಿದರ ಮಾಹಿತಿ ಹಾಗೂ ಹಸ್ತಪ್ರತಿ ಸಂಗ್ರಹಕ್ಕಾಗಿ, ಬೆಳಗಾವಿ ಮತ್ತು ಕಲ್ಬುರ್ಗಿ ವಿಭಾಗದ ಜಿಲ್ಲೆಗಳನ್ನು ಕೇಂದ್ರವಾಗಿರಿಸಿಕೊಂಡು, 11 ಜನ ಸಂಶೋಧಕರು ಕಾರ್ಯಾರಂಭ ಮಾಡಲಿದ್ದಾರೆ ಎಂದರು.**

<><><>

**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿ ನಿಯಮಿತ – 'ಹೆಸ್ಕಾಂ' ವ್ಯಾಪ್ತಿಯಲ್ಲಿ, ಒಟ್ಟು 3 ಸಾವಿರದ 9 ನೂರಾ 37 ಗ್ರಾಹಕರು, ಸೌರ ಮೇಲ್ಛಾವಣಿ ಯೋಜನೆಯಡಿ, ಸೌರ ವಿದ್ಯುತ್ ಅಳವಡಿಸಿಕೊಂಡು, 89 ದಶಾಂಶ 9–3 ಮೆಗಾ ವ್ಯಾಟ್ ಸೌರ ವಿದ್ಯುತ್ ಉತ್ಪಾದಿಸುತ್ತಿದ್ದಾರೆ ಎಂದು, ಹೆಸ್ಕಾಂ ಅಧ್ಯಕ್ಷ ಸೈಯ್ಯದ್ ಅಜೀಂಪೀರ್ ಖಾದ್ರಿ ತಿಳಿಸಿದ್ದಾರೆ. ಹುಬ್ಬಳ್ಳಿಯ, ನವನಗರದ ಹೆಸ್ಕಾಂ ಕಚೇರಿಯಲ್ಲಿ ಅವರು ಸುದ್ದಿಗೋಷ್ಠಿ ನಡೆಸಿ, ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯ ಸದುಪಯೋಗ, ಗ್ರಾಹಕರು ಪಡೆಯುವಂತೆ ಕೋರಿದರು. ಧಾರವಾಡ, ಹಾವೇರಿ, ಗದಗ, ಉತ್ತರಕನ್ನಡ,**

ಬೆಳಗಾವಿ, ಬಾಗಲಕೋಟೆ ಹಾಗೂ ವಿಜಯಪುರ ಸೇರಿ ಒಟ್ಟು 7 ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ಹೆಸ್ಕಾಂನಡಿ, ಒಟ್ಟು 62 ಲಕ್ಷ ಗ್ರಾಹಕರಿದ್ದಾರೆ ಎಂದರು.

<><><>

“ಸಮಗ್ರ ಮತ್ತು ಸುಸ್ಥಿರ ಭವಿಷ್ಯಕ್ಕಾಗಿ, ವಿಶೇಷಚೇತನ ವ್ಯಕ್ತಿಗಳಲ್ಲಿ, ನಾಯಕತ್ವಕ್ಕೆ ಉತ್ತೇಜನ” ಎಂಬ, ವಿಶ್ವ ಸಂಸ್ಥೆಯ ಧ್ಯೇಯದೊಂದಿಗೆ, ಇಂದು, ವಿಶ್ವ ವಿಶೇಷಚೇತನರ ದಿನ ಆಚರಿಸಲಾಗುತ್ತಿದೆ. ಅಂಗವೈಕಲ್ಯವು ಒಂದು ಮಿತಿಯಲ್ಲ, ಸವಾಲನ್ನು ಅವಕಾಶವಾಗಿ ಪರಿವರ್ತಿಸಿ, ಬದಲಾವಣೆ ತರಬಲ್ಲ ವಿಶಿ ್ಟ ಶಕ್ತಿಯಾಗಿದೆ. ವಿಶೇಷಚೇತನ ವ್ಯಕ್ತಿಗಳ ನಾಯಕತ್ವವನ್ನು ವರ್ಧಿಸುವ ಮೂಲಕ, ಹೊಸ ಸಾಧ್ಯತೆಗಳನ್ನು ಸೃಷ್ಟಿಸಬಹುದು ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ತಮ್ಮ ಎಕ್ಸ್ ಖಾತೆಯಲ್ಲಿ ತಿಳಿಸಿದ್ದಾರೆ.

<><><>

ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 12 ನೇ ಘಟಿಕೋತ್ಸವ, ಇಂದು ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ ಡಾಕ್ಟರ್ ಎ.ಪಿ.ಜೆ ಅಬ್ದುಲ್ ಕಲಾಂ ಜ್ಞಾನ ಸಂಗಮ ಸಭಾಂಗಣದಲ್ಲಿ ನಡೆಯಲಿದೆ ಎಂದು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೊಫೆಸರ್ ಸಿ.ಎಂ ತ್ಯಾಗರಾಜ ತಿಳಿಸಿದ್ದಾರೆ.

<><><>

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಫೇಜಲ್ ಚಂಡಮಾರುತದ ಪರಿಣಾಮ, ತೀವ್ರ ಮಳೆ ಹಿನ್ನೆಲೆ, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಮಂಗಳೂರಿನ ಪ್ರಾಕೃತಿಕ ಸ್ಥಿತಿಗತಿ ಪರಿಶೀಲನೆ ನಡೆಸಿದರು. ಜಿಲ್ಲಾ ಪಂಚಾಯತ್‌ನಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ರಸ್ತೆ, ವಿದ್ಯುತ್ ತೊಂದರೆಗಳನ್ನು ಪರಿಹರಿಸಲು, ಅಗತ್ಯ ಯಂತ್ರೋಪಕರಣಗಳೊಂದಿಗೆ ಸನ್ನದ್ಧರಾಗಿರಲು, ಅವರು ಅಧಿಕಾರಿಗಳಿಗೆ ಸೂಚಿಸಿದರು. ಗುಡ್ಡದ ಸಮೀಪ ಮನೆ ಉಳ್ಳವರು ಜಾಗರೂಕತೆ ಪಾಲಿಸಬೇಕು. ಪ್ರವಾಸಿಗರು ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

<><><>

ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ, ದೇಶದ ಇತರೆ ರಾಜ್ಯಗಳ ಸಂಸ್ಕೃತಿ, ಭಾಷೆ ವೈವಿಧ್ಯತೆಗಳ ಬಗ್ಗೆ ತಿಳಿಯಲು ಸಹಕಾರಿಯಾಗಿದ್ದು, ಸಮುದಾಯದ ಯುವಜನರನ್ನು ಒಟ್ಟುಗೂಡಿಸುತ್ತದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ಹೇಳಿದ್ದಾರೆ. ಬೆಂಗಳೂರು ಜ್ಞಾನ ಭಾರತಿ ವಿಶ್ವವಿದ್ಯಾಲಯದ, ಎನ್.ಎಸ್.ಎಸ್ ಭವನದಲ್ಲಿ ಜರುಗಿದ, 16ನೇ ಯುವ ಗಿರಿಜನ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ರಾಜ್ಯದ ವಿದ್ಯಾರ್ಥಿಗಳು ಇತರೆ ಪ್ರದೇಶಗಳ ರೋಮಾಂಚಕ ಸಂಸ್ಕೃತಿಯನ್ನು ಅನುಭವಿಸಲು ಇದು ಸಹಕಾರಿ ಎಂದರು.

<><><>

ಹರಿಯಾಣದಲ್ಲಿ ನಾಳೆಯಿಂದ 16 ರ ವರೆಗೆ ನಡೆಯುವ, ಬಿ.ಸಿ.ಸಿ.ಐ. ಸೀಮಿತ ಓವರ್ ಗಳ, ಮಹಿಳಾ ಕ್ರಿಕೆಟ್ ಪಂದ್ಯಾವಳಿಯಲ್ಲಿ, ಶಿವಮೊಗ್ಗದ ಆರ್.ಅದಿತಿ, ಕರ್ನಾಟಕ ರಾಜ್ಯ ತಂಡವನ್ನು ಪ್ರತಿನಿಧಿಸಲಿದ್ದಾರೆ. ಕರ್ನಾಟಕ ಮಹಿಳಾ ಕ್ರಿಕೆಟ್ ತಂಡವನ್ನು ವೇದಾ ಕೃಷ್ಣಮೂರ್ತಿ ಮುನ್ನಡೆಸಲಿದ್ದಾರೆ. ವಿವಿಧ ವಯೋವರ್ಗದಲ್ಲಿ 16 ನೇ ವರ್ಷದಿಂದಲೂ ರಾಜ್ಯ ತಂಡವನ್ನು ಪ್ರತಿನಿಧಿಸುತ್ತಾ ಬಂದಿರುವ ಅದಿತಿ, ಉತ್ತಮ ಆಲ್ ರೌಂಡರ್ ಹಾಗೂ ಬಲಗೈ ಸ್ಪಿನ್ನರ್ ಆಗಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ಪ್ರಧಾನಿಮಂತ್ರಿಯವರ ಕಾರ್ಯಕ್ರಮದ ನೇರ ಪ್ರಸಾರದ ಹಿನ್ನೆಲೆ,
ಇಂದು ಮಧ್ಯಾಹ್ನದ 1 ಗಂಟೆ 10 ನಿಮಿಷದ, ರಾಷ್ಟ್ರೀಯ ವಾರ್ತೆ,
ಮಧ್ಯಾಹ್ನ 3
ಗಂಟೆಗೆ
ಪ್ರಸಾರವಾಗಲಿದೆ.